ಸರ್ಕಾರಿ/ ಖಾಸಗಿ ವೈದ್ಯ ಸೀಟುಗಳ ಹಂಚಿಕೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 173 (309)
ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ. (ಮಂಗಳೂರು)
ಉತ್ತರಿಸುವ ಸಚಿವರು : ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು)

ಪ್ರಶ್ನೆಗಳು:–

ಅ) 2011–12ನೇ ಸಾಲಿಗೆ ಸರ್ಕಾರ ಮತ್ತು ಖಾಸಗಿ ವೈದ್ಯ ಕಾಲೇಜುಗಳು ಮಾಡಿಕೊಂಡ ವೈದ್ಯಕೀಯ ಸೀಟು ಹಂಚಿಕೆ ಒಪ್ಪಂದಕ್ಕೆ ಸುಪ್ರೀಂ ಕೋರ್ಟ್‌ನ ಆದೇಶವು ವೈತಿರಿಕ್ತವಾಗಿರುವುದು ನಿಜವೇ?

ಆ) ಹಾಗಿದ್ದಲ್ಲಿ, ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಸರ್ಕಾರ ಯಾವ ಕ್ರಮ ಕೈಗೊಂಡಿದೆ? ವಿವರ ಒದಗಿಸುವುದು;

ಇ) ವೈದ್ಯಕೀಯ ಸೀಟಿನ ಶುಲ್ಕ ನಿಗದಿ ಮಾಡಲು ಕುರಿತು ವರದಿಗಾಗಿ ರಾಜ್ಯ ಸರ್ಕಾರ ನೇಮಿಸಿದ್ದ ಸಮಿತಿಗಳು ಯಾವುವು?

ಈ) ಈ ಸಮಿತಿಗಳು ನೀಡಿದ ವರದಿಗಳನ್ನು ಸರ್ಕಾರ ಒಪ್ಪಿಕೊಂಡಿರುವುದು ನಿಜವೇ; ಸದರಿ ಸಮಿತಿಗಳ ವರದಿಯ ವಿವರಗಳನ್ನು ಒದಗಿಸುವುದು;

ಉ) ಮುಂದಿನ ಶೈಕ್ಷಣಿಕ ವರ್ಷದಿಂದ ವೈದ್ಯಕೀಯ ಕಾಲೇಜುಗಳ ಪ್ರವೇಶವನ್ನು ಪಡೆಯಲು ಸರ್ಕಾರ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವುದೇ?

ಉತ್ತರಗಳು:–

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ವೈದ್ಯಕೀಯ ಸೀಟಿನ ಶುಲ್ಕ ನಿಗದಿ ಮಾಡಲು ರಾಜ್ಯ ಸರ್ಕಾರವು ಶ್ರೀ ಪದ್ಮರಾಜ್ ಆಯೋಗವನ್ನು ನೇಮಿಸಿತ್ತು.

ಈ) ಸದರಿ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಪ್ರಯತ್ನಿಸಲಾಗುವುದು.